9. ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬರುವ ಮೂಡುಶೆಡ್ಡೆಯಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಎಕ್ಸರೇ ಉಪಕರಣ ಯಂತ್ರದ ದುರಸ್ತಿ

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೇ, ಸುರತ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬರುವ ಮೂಡುಶೆಡ್ಡೆಯಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಅಳವಡಿಸಲಾಗಿದ್ದ ಎಕ್ಸರೇ ತೆಗೆಸಿಕೊಳ್ಳಲು ಉಪಯೋಗಿಸುವ ಯಂತ್ರವು ಕಳೆದ ಮೂರು ವರ್ಷಗಳಿಂದ ಕೆಟ್ಟು ಹೋಗಿದ್ದು ಅದನ್ನು ರಿಪೇರಿ ಮಾಡಿಸಲು ಇಲಾಖಾ ಆಡಳಿತ ಯಂತ್ರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವಾದ ಕಾರಣ ಸಾರ್ವಜನಿಕರಿಗೆ, ಬಡರೋಗಿಗಳಿಗೆ ತುಂಬಾ ಅನಾನುಕೂಲವಾಗಿದೆ. ರೋಗಿಗಳು ಎಕ್ಸರೇ ತೆಗೆಸಿಕೊಳ್ಳಲು ಮಂಗಳೂರಿಗೆ ಬಂದು ಹೋಗಬೇಕಾಗಿದ್ದು ವಿಶೇಷತಃ ಬಡ ಜನರಿಗೆ ಬಹಳಷ್ಟು ತೊಂದರೆಯುಂಟಾಗಿದೆ. ಆದ್ದರಿಂದ ಕೂಡಲೇ ಆ ಎಕ್ಸರೇ ಯಂತ್ರವನ್ನು ದುರಸ್ತಿ ಮಾಡಿಸುವ ಅಥವಾ ಹೊಸ ಯಂತ್ರವನ್ನು ಅಳವಡಿಸುವ ಕಾರ್ಯವನ್ನು ಮಾನ್ಯ ಆರೋಗ್ಯ ಸಚಿವರು ತ್ವರಿತವಾಗಿ ಜರುಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಆರೋಗ್ಯ ಸಚಿವರು ರೈಲ್ವೆ ಅಪಘಾತ ಆಗಿರುವ ಸ್ಥಳಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಉತ್ತರ ತರಿಸಿಕೊಡುತ್ತೇನೆ.

10. ವಿಜಾಪುರ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಪ್ಪ (ತಿಕೋಟ) : ಮಾನ್ಯ ಅಧ್ಯಕ್ಷರೇ, ವಿಜಾಪುರ ನಗರದಲ್ಲಿ ಜನಸಾಮಾನ್ಯರಿಗೆ ಕುಡಿಯುವ ನೀರು ಒದಗಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ 15 ವರ್ಷಗಳಿಂದ ಜನ ಸಾಮಾನ್ಯರಿಗೆ ಸಿಕ್ಕಿದ್ದು ಬರೀ ಆಶ್ವಾಸನೆ ಮಾತ್ರ. ಈ ಗಂಭೀರವಾದ ವಿಷಯದ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಈಗಾಗಲೇ ನಗರಾಭಿವೃದ್ಧಿ ಸಚಿವರಿಗೆ ಈ ವಿಷಯದ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಬಿಜಾಪುರ ನಗರದ ಕುಡಿಯುವ ನೀರಿನ 2ನೇ ಹಂತದ ಯೋಜನೆಯನ್ನು ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯ್ಲಿಯವರು ಬಿಜಾಪುರಕ್ಕೆ ಭೇಟಿ ಕೊಟ್ಟಾಗ, 1995ರೊಳಗೆ ಮುಗಿಸುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಮಾಡಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಈ ಯೋಜನೆಯನ್ನು ಮುಗಿಸಬೇಕಾದರೆ ಇನ್ನೂ 14ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದ ವಿಚಾರ ಇಷ್ಟೆ. 1995ರ ಮಾರ್ಚಿಯೊಳಗೆ ಮುಗಿಸಬೇಕಾದರೆ, ಇನ್ನೂ 14 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗುತ್ತದೆ. ಆದಷ್ಟು ಶೀಘ್ರವಾಗಿ ಈ 14 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟು, ಈ ಕಾರ್ಯವನ್ನು 1995ರ ಮಾರ್ಚಿಯೊಳಗೆ ಮುಗಿಸಬೇಕೆಂದು, ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಸವನಗೌಡ ಆರ್. ಪಾಟೀಲ್ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ 16 ಕೋಟಿ 70 ಲಕ್ಷ ರೂಪಾಯಿನಷ್ಟು ಆಡಳಿತಾತ್ಮಕ ಅನುದಾನವನ್ನು ಸರ್ಕಾರ ಕೊಟ್ಟರೂ ಸಹ, ಇದುವರೆಗೂ ಈ ಯೋಜನೆಗೆ ಸುಮಾರು 15 ಕೋಟಿ 41 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಖರ್ಚಿನ ಅಂದಾಜು ನೋಡಿದರೆ, ಅರ್ಧಕ್ಕಿಂತ ಹೆಚ್ಚು ಕೆಲಸ 2ನೇ ಹಂತದ ಯೋಜನೆಗೆ ಆಗಿಲ್ಲ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ. ಮಹಾರಾಷ್ಟ್ರ ರಾಜ್ಯದ ಸರ್ಕಾರದಿಂದ ತಿರಸ್ಕೃತವಾದ ಪೈಪುಗಳನ್ನು ಹಾಕಿ, ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದುದರಿಂದ,